

‘ಲಿಯೊ’ ಚಿತ್ರದಲ್ಲಿ ವಿಜಯ್


ಪ್ರಿಯಾಂಶು

# ಏನದು ಮಾತುಕತೆ? ಟಾಲಿವುಡ್ ಹೊಸ ಕಥೆ

**■ ವಿಶಾಖ ಎನ್.**

ವಿಜಯ್ ಮಕ್ಕಳ್ ಇಯಕ್ಕಮ್ ಎನ್ನುವ ಪಡೆಯೊಂದು ತಮಿಳುನಾಡಿನಲ್ಲಿ ಸಕ್ರಿಯವಾಗಿದೆ. ಇದು ಸೂಪರ್‌ಸ್ಟಾರ್ ವಿಜಯ್ ಅಭಿಮಾನಿ ಬಳಗ. ಕೆಲವು ದಿನಗಳ ಕಾಲ ಸತತವಾಗಿ ಈ ಬಳಗದ ಪದಾಧಿಕಾರಿಗಳ ಜತೆಗೆ ವಿಜಯ್ ಹಲವು ಸುತ್ತಿನ ಮಾತುಕತೆ ನಡೆಸಿದರು. ‘ಲಿಯೊ’ ತಮಿಳು ಸಿನಿಮಾ ಚಿತ್ರೀಕರಣ ಮುಗಿಸಿದ ಮೇಲೆ ಈ ಮಾತುಕತೆ ನಡೆದಿರುವುದರಿಂದ ಆ ಸಿನಿಮಾ ಪ್ರಚಾರ ತಂತ್ರ ಆಗಿರಬಹುದು ಎನ್ನುವುದು ಸಹಜ ಲೆಕ್ಕಾಚಾರ. ಆದರೆ, ವಿಜಯ್ ರಾಜಕೀಯ ಪ್ರವೇಶಿಸಲು ಹೋಂವರ್ಕ್ ಮಾಡಿಕೊಳ್ಳಲೆಂದೇ ಆ ಮಾತುಕತೆ ನಡೆಸಿದರು ಎನ್ನುವ ಅಭಿಪ್ರಾಯವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ. ವಿಜಯ್ ಮಾತ್ರ ಈ ಯಾವ ಸುದ್ದಿಗೂ ಪ್ರತಿಕ್ರಿಯೆ ನೀಡಿಲ್ಲ.

ಜುಲೈ 24ರಂದು ಅವರು ಹಾಗೂ ಇನ್ನೂ ಕೆಲವರು ವಿಮಾನ ನಿಲ್ದಾಣದಲ್ಲಿ ಚೆಕ್–ಇನ್ ಆಗುವ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದವು. ಅವರು ಒಂದಿಷ್ಟು ದಿನ ಪ್ರವಾಸಕ್ಕೆ ತೆರಳಿರುವುದನ್ನು ಇದು ಸ್ಪಷ್ಟಪಡಿಸುತ್ತದೆ. ಅವರು ಹೋಗಿರುವುದು ಎಲ್ಲಿಗೆ ಎನ್ನುವುದು ಮಾತ್ರ ಗುಟ್ಟಾಗಿ ಉಳಿದಿದೆ.

‘ಲಿಯೊ’ ತಮಿಳು ಸಿನಿಮಾ ಬಿಡುಗಡೆಗೆ ಅವರ ಅಭಿಮಾನಿಗಳು ಕಾತರರಾಗಿದ್ದಾರೆ. ಲೋಕೇಶ್ ಕನಕರಾಜ್ ನಿರ್ದೇಶನದ ಈ ಸಿನಿಮಾದ ಆಡಿಯೊ ಬಿಡುಗಡೆ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ. ಅದೇ ಸಂದರ್ಭದಲ್ಲಿ ವಿಜಯ್ ತಮ್ಮ ರಾಜಕೀಯ ಪ್ರವೇಶದ ಸುದ್ದಿಯನ್ನೂ ನೀಡುವರೆ ಎನ್ನುವ ಪ್ರಶ್ನೆ ಇದೆ. ಲೋಕೇಶ್‌ಅವರಿಗೂ ಈ ವಿಷಯದ ಬಗೆಗೆ ಏನೂ ತಿಳಿದಿಲ್ಲ.

‘ಸಿನಿಮಾ ಯಾವ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ನಾನು ಈಗಲೇ ಹೇಳುವುದಿಲ್ಲ. ಸೆಪ್ಟೆಂಬರ್‌ನಲ್ಲಿ ಒಂದಿಷ್ಟು ಸುಳಿವನ್ನು ನೀಡುವೆ. ಅಕ್ಟೋಬರ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ’ ಎಂದಷ್ಟೆ ಲೋಕೇಶ್ ಕನಕರಾಜ್ ಹೇಳಿದ್ದು.

ತ್ರಿಶಾ, ಸಂಜಯ್ ದತ್, ಗೌತಮ್ ವಾಸುದೇವ್ ಮೆನನ್, ಮಿಸ್ಕಿನ್ ಹೀಗೆ ದೊಡ್ಡ ತಾರಾಬಳಗವನ್ನು ಲೋಕೇಶ್ ಕನಕರಾಜ್ ನಿರ್ದೇಶಿಸಿದ್ದಾರೆ. ಅನಿರುದ್ಧ್ ರವಿಚಂದರ್ ಸಂಗೀತ ಚಿತ್ರಕ್ಕಿದೆ.

‘ಇಂಟರ್ನಲ್ ಅಫೇರ್ಸ್’ ಎನ್ನುವ ಟೆಲಿಪ್ಲೇ ಕನ್ನಡ ಹಾಗೂ ತೆಲುಗಿಗೆ ಡಬ್ ಆಗಿ ಬಂದಿದೆ. ಝೀ ಥಿಯೇಟರ್ಸ್ ನಿರ್ಮಾಣದ ಈ ನಾಟಕವನ್ನು ಟೀವಿಯಲ್ಲಿ ನೋಡುವಂತೆ ಚಿತ್ರೀಕರಿಸಿರುವುದು ವಿಶೇಷ. ಆಧಾರ್ ಖುರಾನಾ ನಿರ್ದೇಶನದ ಈ ಟೆಲಿಪ್ಲೇಯಲ್ಲಿನ ಮುಖ್ಯ ಪಾತ್ರಧಾರಿ ಪ್ರಿಯಾಂಶು ಪೇನ್ಯುಲಿ ಮಾತಿಗೆ ಸಿಕ್ಕರು.

ಕ್ರೈಸ್ಟ್ ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಪ್ರಿಯಾಂಶು, ಸೇನಾ ಕುಟುಂಬದ ಹಿನ್ನೆಲೆಯವರು. ಇಲ್ಲಿನ ಅಲಯನ್ಸ್ ಫ್ರಾನ್ಸೆಯಲ್ಲಿಯೂ ಅವರು ರಂಗಭೂಮಿಯ ಪಟ್ಟುಗಳನ್ನು ಕಲಿತಿದ್ದರು. ರಂಗಶಂಕರ, ಚೌಡಯ್ಯ ಸ್ಮಾರಕ ಭವನದ ಸಾಂಸ್ಕೃತಿಕ ಕಾರ್ಯಕ್ರಮಗಳ ಸಖ್ಯವೂ ಇತ್ತು.

ಬೆಂಗಳೂರಿನಿಂದ ಮುಂಬೈಗೆ ಹೋಗಿ ಅವರು ರೂಪದರ್ಶಿಯಾದರು. ಸಿನಿಮಾ ತಯಾರಿಯ ಜ್ಞಾನವೂ (ಮಲ್ಲೇಶ್ವರದ ಎಸ್‌ಎಇ ಇನ್‌ಸ್ಟಿಟ್ಯೂಟ್‌ನಲ್ಲಿ ಪದವಿ ಪಡೆದಿದ್ದರು) ಇದ್ದಿದ್ದರಿಂದ ಸಹಾಯಕ ನಿರ್ದೇಶಕರಾದರು. ‘ಮಿರ್ಜಾಪುರ್’ ವೆಬ್‌ಸೀರೀಸ್‌ನ ಎರಡನೇ ಭಾಗದಲ್ಲಿ ಅವರು ಅಭಿನಯಿಸಿದ ಮೇಲೆ ಅನೇಕರಿಗೆ ಚಿರಪರಿಚಿತರಾದರು.

‘ಟೆಲಿಪ್ಲೇ ಎನ್ನುವುದು ನಾಟಕವನ್ನೇ ಮನೆಯ ಟೀವಿ ಪರದೆಗೆ ತಂದಿಟ್ಟಂತೆ. ಬೆಂಗಳೂರಿನಂತಹ ಮೆಟ್ರೊ ನಗರದಲ್ಲಿ ರಂಗಮಂದಿರಕ್ಕೆ ತೆರಳಿ ನಾಟಕ ನೋಡಿ ಬರುವುದೀಗ ಮೊದಲಿನಷ್ಟು ಸುಲಭವಲ್ಲ. ಹೀಗಾಗಿ ಈ ಪ್ರಯೋಗಕ್ಕೆ ಕನ್ನಡ ಭಾಷೆಯ ವೇದಿಕೆಯನ್ನು ಆರಿಸಿಕೊಂಡೆವು. ತೆಲುಗಿನಲ್ಲಿಯೂ ಇದು ಪ್ರಸಾರವಾಗಲಿದೆ’ ಎಂದು ಪ್ರಿಯಾಂಶು ಪೀಠಿಕೆ ಹಾಕಿದರು.

ಒಟಿಟಿ ವೆಬ್‌ಸೀರೀಸ್‌ಗಳು, ಧಾರಾವಾಹಿಗಳು ಇವೆಲ್ಲವೂ ಜನರನ್ನು ಹಿಡಿದಿಟ್ಟಿದ್ದರೂ ನಾಟಕವನ್ನು ಅದರ ಅನುಭವ ದಕ್ಕಿಸಿಕೊಳ್ಳುವಂತೆ ನೋಡುವವರು ಇನ್ನೂ ಇದ್ದಾರೆ. ಅಂಥವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ‘ಇಂಟರ್ನಲ್ ಅಫೇರ್ಸ್’ ಎನ್ನುವ ರಾಮ್–ಕಾಮ್ ಅನ್ನು ಹೆಣೆಯಲಾಗಿದೆ ಎಂದು ಅವರು ವಸ್ತುವಿಷಯದ ಮೇಲೆ ಬೆಳಕು ಚೆಲ್ಲಿದರು. ಕನ್ನಡ ಸಿನಿಮಾಗಳಲ್ಲಿ ಅವಕಾಶ ಸಿಕ್ಕರೆ ಅಭಿನಯಿಸಲು ಕೂಡ ಪ್ರಿಯಾಂಶು ಸಿದ್ಧವಿದ್ದಾರೆ.

ಕಾರ್ಪೊರೇಟ್ ಲೋಕದಲ್ಲಿ ಹೊಸದಾಗಿ ಕೆಲಸಕ್ಕೆ ಸೇರುವ ಯುವಕ–ಯುವತಿ ಪ್ರೇಮಿಗಳಾಗುವ ಕಥಾಹಂದರದ ನಾಟಕವಿದು. ಆಮೇಲೆ ಅವರ ಗತಬದುಕಿನ ಸಿಕ್ಕುಗಳೆಲ್ಲ ಬಿಚ್ಚಿಕೊಳ್ಳತೊಡಗುತ್ತವೆ.

ಈ ಟೆಲಿಪ್ಲೇ ಟಾಟಾ ಪ್ಲೇ ಥಿಯೇಟರ್‌ನಲ್ಲಿ ಆಗಸ್ಟ್ 5ಕ್ಕೆ, ಏರ್‌ಟೆಲ್ ಥಿಯೇಟರ್, ಡಿಷ್ ಟೀವಿ ರಂಗಮಂಚ್ ಆರ್ಕೈವ್ ಹಾಗೂ ಡಿ2ಎಚ್ ರಂಗಮಂಚ್ ಆರ್ಕೈವ್‌ನಲ್ಲಿ ಆಗಸ್ಟ್ 12ರಂದು ನೋಡಲು ಲಭ್ಯ. ■